SEVA BHARATHI
सेवा ही परमो धर्मः

ಸಂಚಿಕೆ : 05
ಸಂಪುಟ : 05

# ಸೇವಾಪಥ

ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)

ಮಾಸಿಕ e-ನ್ಯೂಸ್ ಲೆಟರ್ – ಮೇ 2024

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–॥, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216




## ಶೃಂಗೇರಿ ಗುರುಗಳ ಪೀಠರೋಹಣದ 50ನೇ ವರ್ಷದ ಸಂಭ್ರಮ
## ಸುವರ್ಣ ಭಾರತಿ ಕಾರ್ಯಕ್ರಮದ ಪ್ರಯುಕ್ತ ಶೃಂಗೇರಿಯಲ್ಲಿ 3 ದಿನಗಳ ಕಾಲ ಉಚಿತ ಆರೋಗ್ಯ ತಪಾಸಣೆ, ಪರಿಕರಗಳ ವಿತರಣೆ
## ಶ್ರೀ ಶಾರದೆಯ ಮುಖ್ಯ ಗೋಪುರದಿಂದ ಗಾಲಿಕುರ್ಚಿ ಜಾಥಾ

## ಉಜಿರೆಯಲ್ಲಿ ಬೃಹತ್ ರಕ್ತದಾನ ಶಿಬಿರ
## 168 ಯೂನಿಟ್ ರಕ್ತ ಸಂಗ್ರಹ

## ಗಾಯದ ಬದುಕಿಗೆ ಸಂಜೀವಿನಿಯಾದ ಸೆಲ್ಕೋ
## 25 ಮಂದಿ ದಿವ್ಯಾಂಗರಿಗೆ ರೂ. 65,000 ದ ಸೋಲಾರ್ ಕಿಟ್ ವಿತರಣೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ಈ ತಿಂಗಳು 2 ಮುಖ್ಯ ಕಾರ್ಯಕ್ರಮಗಳು ಜರುಗಿತು. ಮೊದಲನೆಯದು ಶೃಂಗೇರಿಯಲ್ಲಿ 3 ದಿನಗಳ ಉಚಿತ ಆರೋಗ್ಯ ತಪಾಸಣೆ, ಮಾಹಿತಿ, ತರಬೇತಿ ಶಿಬಿರ ಹಾಗೂ 2ನೆಯದು ಉಜಿರೆಯಲ್ಲಿ ಬೃಹತ್ ರಕ್ತದಾನ ಶಿಬಿರ. ಎರಡೂ ಕೂಡಾ ಯಶಸ್ವಿ ಶಿಬಿರಗಳು. ಶೃಂಗೇರಿಯಲ್ಲಿ ನಡೆದ ಶಿಬಿರದಲ್ಲಿ ವೈದ್ಯರ ಸಮಾಲೋಚನೆ, 3 ದಿನದ ಊಟ, ಉಪಹಾರ, ತಪಾಸಣೆಗಳು ಉಚಿತವಾಗಿ ಮಠದ ಕಡೆಯಿಂದಲೇ ಭರಿಸಲಾಗಿತ್ತು. ಅದಲ್ಲದೆ 3 ಗಾಲಿಕುರ್ಚಿ ಮತ್ತು ಶಿಬಿರಾರ್ಥಿಗಳಿಗೆ ಬೇಕಾದ ಮೆಡಿಕಲ್ ಕಿಟ್‌ಗಳನ್ನೂ ಉಚಿತವಾಗಿ ನೀಡಲ್ಪಟ್ಟಿತ್ತು. ಈ ರೀತಿಯಲ್ಲಿ ಮಠವೂ ಸಮಾಜದ ಬಗ್ಗೆ ಕಳಕಳಿಯನ್ನು ತೋರಿಸಿರುವುದು ನಿಜಕ್ಕೂ ಅಭಿನಂದನಾರ್ಹ. ಅಲ್ಲದೆ ಇತರೆ ಮಠ–ಮಂದಿರಗಳಿಗೂ ಇದು ಮಾದರಿಯಾಗಬೇಕಿದೆ. ಒಟ್ಟಿನಲ್ಲಿ ಗುರುಗಳಿಗೆ ಮಠದ ಎಲ್ಲ ಜವಾಬ್ದಾರಿಯುತರಿಗೆ ನಾವೆಲ್ಲರೂ ಚಿರಋಣಿಗಳೇ. ಭಾಗವಹಿಸಿದ ಎಲ್ಲರೂ ಶ್ರೀ ಶಾರದೆಯ ದರ್ಶನ ಮಾಡಿರುವುದು ಕೂಡಾ ಧನ್ಯತೆಯ ಭಾವ ಮೂಡಿಸುತ್ತಿದೆ.

ಈ ಬಾರಿಯೂ ಹವಾಮಾನ ವೈಪರೀತ್ಯ ಎಲ್ಲರನ್ನೂ ಬಸವಳಿಯುವಂತೆ ಮಾಡಿದೆ. ನಮ್ಮ ರಕ್ತದಾನ ಶಿಬಿರಗಳು ಈ ಕಾರಣದಿಂದಲೇ ನಿಧಾನವಾಗಿ ಆರಂಭಗೊಂಡಿತು. ಆಸ್ಪತ್ರೆಗಳ ರಕ್ತನಿಧಿ ಕೇಂದ್ರಗಳು ನಿರಂತರ ಸಂಪರ್ಕಿಸುತ್ತಲೇ ಇದ್ದರೂ ಅವರ ಬೇಡಿಕೆಗಳನ್ನು ಪೂರೈಸಲು ಕಷ್ಟವಾಗುತ್ತಿತ್ತು. ಆದರೆ 26ನೇ ತಾರೀಖಿಗೆ ಉಜಿರೆಯಲ್ಲಿ ಅನೇಕ ಸಂಘ–ಸಂಸ್ಥೆಗಳ ನೆರವಿನಿಂದ SDM ಕಾಲೇಜಿನ NSS ಘಟಕದ ಸಹಾಯದಿಂದ KMC ರಕ್ತನಿಧಿ ಕೇಂದ್ರಕ್ಕೆ 168 ಯುನಿಟ್ ರಕ್ತ ಸಂಗ್ರಹಿಸಿಕೊಡಲು ಸಾಧ್ಯವಾಯಿತು. ಇದು ಒಂದು ದಾಖಲೆಯೇ ಸರಿ. ಜೂನ್ ತಿಂಗಳ 14 ಕ್ಕೆ ಧರ್ಮಸ್ಥಳದಲ್ಲೂ ಒಂದು ಶಿಬಿರ ಆಯೋಜಿಸಲು ಯೋಜಿಸಿದ್ದೇವೆ. ರಕ್ತದಾನಿಗಳು ಸಹಕರಿಸಬೇಕಿದೆ.

ಸೇವಾಧಾಮವು ಪ್ರಸ್ತುತ ನೂರಾರು ಮಂದಿಯ ಬಾಳಿಗೆ ಆಶಾಕಿರಣವಾಗುತ್ತಾ ತನ್ನ ಸಾಮಾಜಿಕ ಬದ್ಧತೆಯನ್ನು ಗಟ್ಟಿಗೊಳಿಸುತ್ತಲೇ ಬಂದಿದೆ. ಶಾರೀರಿಕವಾಗಿ ಅವರು ದಿನನಿತ್ಯದ ಚಟುವಟಿಕೆಗಳೊಂದಿಗೆ ಜೀವನ ನಡೆಸಲು ಸುಲಭವಾಗಿಸುದರ ಜೊತೆಗೆ ಸದ್ಯ ಪ್ರಾರಂಭಗೊಂಡ ಗೀತಾ ಅಭ್ಯಾಸವು ಮಾನಸಿಕ ಶಾಂತಿ–ನೆಮ್ಮದಿಯನ್ನು ನೀಡಲು ಸಹಾಯಕವಾಗುತ್ತಿದೆ ಎಂದು ಅನೇಕ ಸನಿವಾಸಿಗಳ ಅಂಬೋಣ. ಕೇವಲ ಸೇವಾಧಾಮದ ಸನಿವಾಸಿಗಳಲ್ಲದೆ ಹೊರಗಿನ ಇತರೇ ದಿವ್ಯಾಂಗರಿಗೂ ಇದರ ಪ್ರಯತ್ನ ಪ್ರಯೋಜನ ಕಾಣುತ್ತಿದೆ. ಒಟ್ಟಿನಲ್ಲಿ ಈ ಸಲಹೆ ನೀಡಿ ವ್ಯವಸ್ಥೆಗೊಳಿಸಿದ ಗುರುಗಳಾದ ಶ್ರೀ ಸುಬ್ರಾಯ ನಂದೋಡಿಯವರಿಗೆ ಹಾಗೂ ತರಗತಿ 168ರ ಗುರುಗಳಾದ ಇರ್ದೆ ಶಿವರಾಮಭಟ್ಟರಿಗೆ ಹೃದಯಾಂತರಾಳದ ನಮನಗಳನ್ನು ನಾವೆಲ್ಲರೂ ಸಲ್ಲಿಸುತ್ತಿದ್ದೇವೆ. ಈ ರೀತಿ ಮಾನವನಿಂದ ಮಾಧವನಾಗಲು ಈ ಪ್ರಯತ್ನ. ಇದೂ ಒಂದು ಬಗೆ ಸೇವೆ.

*ಸೇವಾ ಹೀ ಪರಮೋ ಧರ್ಮಃ*

ಇತೀ ತಮ್ಮವ,

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |

## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ಹರೀಶ್ ಟಿ. ಪಿ.
6. ಶ್ರೀ ಗೋಪಾಲ ಕೆ. ವಿ.
7. ಶ್ರೀಮತಿ ಜೊಯ್ಸ್ ಫೆರೇರಾ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ವಿಜಯ ಕೊಡವೂರು
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ 24ನೇ ವಸತಿಯುತ ಆರೋಗ್ಯ ತಪಾಸಣೆ ಶಿಬಿರ




ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ ಶೃಂಗೇರಿ ಇದರ ಆಶ್ರಯದಲ್ಲಿ ಶ್ರೀ ಅಭಿನವ ವಿದ್ಯಾತೀರ್ಥ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಶೃಂಗೇರಿ ಸೇವಾಭಾರತಿ ಸೇವಾಧಾಮ ಚಿಕ್ಕಮಗಳೂರು ಜಿಲ್ಲೆ ಇವುಗಳ ಸಹಯೋಗದಲ್ಲಿ 24ನೇ ಬೆನ್ನುಹುರಿ ಅಪಘಾತಕ್ಕೊಳಗಾದ ವರಿಗಾಗಿ ವಸತಿಯುತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರ ಹಾಗೂ ಗಾಲಿಕುರ್ಚಿ ಜಾಥಾ ಉದ್ಘಾಟನಾ ಸಮಾರಂಭವು ಮೇ. 22 ರಂದು ಶ್ರೀ ಅಭಿನವ ವಿದ್ಯಾತೀರ್ಥ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಶೃಂಗೇರಿಯಲ್ಲಿ ನಡೆಯಿತು.

ಈ ಕಾರ್ಯಕ್ರಮದಲ್ಲಿ ದೀನರಿಗೆ, ಆಸಕ್ತರಿಗೆ ಸಹಾಯ ಮಾಡುತ್ತಾ ಅವರಿಗೆ ಜೀವನವನ್ನು ಕರುಣಿಸಲು ಶೃಂಗೇರಿ ಮಠದ ಶ್ರೀ ಗುರುಗಳ ವೈಯಕ್ತಿಕ ಕಾರ್ಯದರ್ಶಿಯಾಗಿರುವ ದಕ್ಷಿಣಮೂರ್ತಿ ಫಲಾನುಭವಿಗಳ ಬಾಳು ಇನ್ನಷ್ಟು ಹಸನಾಗುವಂತೆ ಶುಭ ಹಾರೈಸಿದರು.

ವೇದಿಕೆಯಲ್ಲಿ ಆರ್ಥೋಪೆಡಿಕ್ ವೈದ್ಯರಾದ ಡಾ. ಅತಿಥಿ ವಿಜಯ್ ಮತ್ತು ಚಿಕ್ಕಮಗಳೂರು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಯಾಗಿರುವ ಶ್ರೀ ಪೃಥ್ವಿಜಿತ್, ಸೇವಾಭಾರತಿಯ ಖಜಾಂಚಿ, ಸೇವಾಧಾಮದ ಸಂಸ್ಥಾಪಕರಾದ ಕನ್ಯಾಡಿ ಶ್ರೀ ಕೆ.ವಿನಾಯಕ ರಾವ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಠದ ವತಿಯಿಂದ 3 ಗಾಲಿಕುರ್ಚಿ ಹಾಗೂ ಮೆಡಿಕಲ್ ಕಿಟ್, ಸೆಲ್ಫ್‌ಕೇರ್ ಕಿಟ್‌ಗಳನ್ನು ವಿತರಿಸಿದರು.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಶೃಂಗೇರಿ ಹಾಗೂ ಎನ್.ಆರ್ ಪುರದ 13 ಮಂದಿ, ಶಿರಸಿಯ 2 ಮಂದಿ ಭಾಗವಹಿಸಿದ್ದು, ಮೂಳೆತಜ್ಞರು, ಕಣ್ಣಿನವೈದ್ಯರು, ದಂತವೈದ್ಯರು, ಫಿಸಿಯೋಥೆರಪಿಸ್ಟ್ ಗಳಿಂದ ಆರೋಗ್ಯ ತಪಾಸಣೆ ನಡೆಸಲಾಯಿತು. 3 ಕಾಲೇಜಿನಲ್ಲಿ ಸುಮಾರು 500 ಮಂದಿ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ ಬಗ್ಗೆ ಮಾಹಿತಿ ನೀಡಲಾಯಿತು. ಕೊನೆಯ ದಿನ ಸ್ಥಳೀಯ ಶಾರದಾ ನರ್ಸಿಂಗ್ ಇನ್ಸ್ಟಿಟ್ಯೂಟ್ ಆಫ್ ಕಾಲೇಜಿನ ವಿದ್ಯಾರ್ಥಿಗಳೊಂದಿಗೆ ಜಾಥವನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಡಾ. ಪ್ರಣವ್, ಕೊಪ್ಪದ ಪ್ರಶಮನಿ ಆಸ್ಪತ್ರೆಯ ಡಾ. ಉದಯಶಂಕರ್, ಪ್ರಶಮನಿ ಟ್ರಸ್ಟಿನ ರೇಖಾ ಉದಯಶಂಕರ್, ಶಿಬಿರಾರ್ಥಿಗಳಿಗೆ ಶುಭ ಹಾರೈಸಿದರು. ಟ್ರಸ್ಟಿ ಕೆ. ವಿನಾಯಕ ರಾವ್, ಸ್ವಯಂಸೇವಕರಾದ ಜಯರಾಜ್ ಸಾಲ್ಯಾನ್, ಜನಾರ್ಧನ್, ಶ್ರೀಧರ ಮತ್ತು ಸಿಬ್ಬಂದಿಗಳಾದ ಚರಣ್, ಆಶ್ರಿತ್, ನಾಗಾರ್ಜುನ್, ಶಶಾಂತ್ ವ್ಯವಸ್ಥೆಯ ಜವಾಬ್ದಾರಿ ನಿರ್ವಹಿಸಿದ್ದರು.

# ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ ಬಗ್ಗೆ ಅರಿವು



ಬಿ.ಜಿ.ಎಸ್ ಕಾಲೇಜು, ಶೃಂಗೇರಿ ಜೆ.ಸಿ.ಬಿ.ಎಂ. ಕಾಲೇಜು, ಶೃಂಗೇರಿ ಶಾರದಾ ನರ್ಸಿಂಗ್ ಇನ್ಸ್ಟಿಟ್ಯೂಟ್, ಶೃಂಗೇರಿ

ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ವಸತಿಯುತ ಆರೋಗ್ಯ ತಪಾಸಣೆ, ಜಾಗೃತಿ ಶಿಬಿರ ಹಾಗೂ ಗಾಲಿಕುರ್ಚಿ ಜಾಥಾದ ಜೊತೆಜೊತೆಗೆ 3 ಕಾಲೇಜಿಗೆ ಭೇಟಿ ನೀಡಿ ಸುಮಾರು 317 ಮಂದಿ ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ ಬಗ್ಗೆ ಮಾಹಿತಿ ನೀಡಲಾಯಿತು.

ಬಿ.ಜಿ.ಎಸ್. ಶೃಂಗೇರಿ ಕಾಲೇಜಿಗೆ ಉಡುಪಿ – ಉತ್ತರಕನ್ನಡ ಕ್ಷೇತ್ರ ಸಂಯೋಜಕರಾದ ಶಶಾಂತ್ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ವಿಶೇಷಚೇತನ ಆ್ಯಂಟೋನಿ ಭೇಟಿ ನೀಡಿ 55 ವಿದ್ಯಾರ್ಥಿಗಳಿಗೆ ಬೆನ್ನುಹುರಿ ಅಪಘಾತ ಹಾಗೂ ಅದರ ನಿರ್ವಹಣೆ ಬಗ್ಗೆ ಅರಿವು ಮೂಡಿಸಿದರು.

ಜೆ.ಸಿ.ಬಿ.ಎಂ. ಶೃಂಗೇರಿ ಕಾಲೇಜಿಗೆ ಸೇವಾಭಾರತಿಯ ಖಜಾಂಚಿ, ಸೇವಾಧಾಮದ ಸಂಸ್ಥಾಪಕರಾದ ಕನ್ಯಾಡಿ ಶ್ರೀ ಕೆ. ವಿನಾಯಕ ರಾವ್ ಹಾಗೂ ಫಂಡ್ ರೈಸಿಂಗ್ ಅಂಡ್ ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ಆಶ್ರಿತ್.ಸಿ.ಪಿ. ಭೇಟಿನೀಡಿ 94 ವಿದ್ಯಾರ್ಥಿಗಳಿಗೂ ಮಾಹಿತಿಯನ್ನು ನೀಡಲಾಯಿತು.

ಶಾರದಾ ನರ್ಸಿಂಗ್ ಕಾಲೇಜಿಗೆ ಸೇವಾಭಾರತಿ ಕನ್ಯಾಡಿಯ ಹಿರಿಯ ಪ್ರಬಂಧಕರಾದ ಚರಣ್ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ವಿಶೇಷ ಚೇತನರಾದ ಕೃಷ್ಣ ಭೇಟಿ ನೀಡಿ 168 ವಿದ್ಯಾರ್ಥಿಗಳಿಗೆ ಮಾಹಿತಿ ಇತ್ತರು.

# ಚಿಕ್ಕಮಗಳೂರು ಜಿಲ್ಲೆಯಲ್ಲಿ ಶಿಬಿರದ ಜೊತೆ ಗಾಲಿಕುರ್ಚಿ ಜಾಥಾ



ಶ್ರೀಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಯ ಶ್ರೀ ಶಾರದಾಪೀಠ ಶೃಂಗೇರಿ ಇದರ ಆಶ್ರಯದಲ್ಲಿ ಶ್ರೀ ಅಭಿನವ ವಿದ್ಯಾತೀರ್ಥ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಶೃಂಗೇರಿ ಸೇವಾಭಾರತಿ ಸೇವಾಧಾಮ ಚಿಕ್ಕಮಗಳೂರು ಜಿಲ್ಲೆ ಇವುಗಳ ಸಹಯೋಗದಲ್ಲಿ 24ನೇ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ವಸತಿಯುತ ಉಚಿತ ಶಿಬಿರದಲ್ಲಿ ಮೇ 24, 2024 ರಂದು ಜನಸಾಮಾನ್ಯರಿಗೆ ಬೆನ್ನುಹುರಿ ಅಪಘಾತದ ಬಗ್ಗೆ ಅರಿವು ಮೂಡಿಸಲು ಮತ್ತು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಮುಖ್ಯವಾಹಿನಿಗೆ ಕರೆತರುವ ಉದ್ದೇಶದಿಂದ ಗಾಲಿಕುರ್ಚಿ ಜಾಥಾವನ್ನು ನಡೆಸಲಾಯಿತು.

ಗಾಲಿಕುರ್ಚಿ ಜಾಥಾಕ್ಕೆ ಶೃಂಗೇರಿಯ ಸಬ್–ಇನ್ಸ್‌ಪೆಕ್ಟರ್ ಲಿಂಗಪ್ಪ ಡಿ. ಜಕ್ಕಣ್ಣನವರು ಹಸಿರುನಿಶಾನೆ ತೋರುವುದರ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ಶ್ರೀ ಶಾರದಾಂಬ ದೇವಸ್ಥಾನದ ಮುಂಭಾಗದಿಂದ ಪ್ರಾರಂಭಿಸಿ ವೆಲ್ಕಮ್‌ಗೇಟ್ ಬಳಿ ಇರುವ ಪೆಟ್ರೋಲ್ ಪಂಪ್ ಹತ್ತಿರ ಮುಕ್ತಾಯಗೊಳಿಸಲಾಯಿತು.

ಒಟ್ಟು 15 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರೊಂದಿಗೆ, ಸೇವಾಭಾರತಿ ಸಿಬ್ಬಂದಿವರ್ಗ, ಹಾಗೂ ವಿದ್ಯಾರ್ಥಿಗಳು ಸೇರಿದಂತೆ 105 ಮಂದಿ ಜಾಥಾದಲ್ಲಿ ಭಾಗವಹಿಸಿದ್ದರು.

## ಮಹನೀಯ ದಾನಿಗಳು

ಶ್ರೀ ಶೃಂಗೇರಿ ಶಾರದಾ ಪೀಠಂ, ಶೃಂಗೇರಿ
ಸಿ.ಎ. ಬ್ಯಾಂಕ್, ಬೆಳ್ತಂಗಡಿ
ಶ್ರೀ ಅಭಿನಂದನ್.ಎನ್, ಬೆಂಗಳೂರು
ಡಾ. ಎನ್.ಎಂ. ತುಳುಪುಳೆ, ಅಳದಂಗಡಿ
ಶ್ರೀ ವಿ. ಗೋಪಾಲಕೃಷ್ಣ, ಬೆಂಗಳೂರು
ಡಾ. ಅರ್ಚನಾ ಚೇತನ್, ಬೆಂಗಳೂರು
ಕು. ಪ್ರಮೀಳಾ ಶೆಟ್ಟಿ, ಮೂಡಿಗೆರೆ
ಶ್ರೀ ರಜತ್ ಕುಮಾರ್ ಜೆ.ಡಿ, ವೇಣೂರು
ಶ್ರೀ ಮನೋಜ್ ಕುಮಾರ್ ಜೈನ್, ಧರ್ಮಸ್ಥಳ
ಶ್ರೀ ಶೌರ್ಯ ವಿ. ರಾವ್, ಬೆಂಗಳೂರು
ಶ್ರೀ ಶಶಿಧರ್ ಕೆ., ಕನ್ಯಾಡಿ, ಮತ್ತಿಲ
ಕು. ಬಿಂದು, ಬೆಂಗಳೂರು
ಶ್ರೀ ರಜತ್ ರಾವ್, ಧರ್ಮಸ್ಥಳ
ಶ್ರೀ ಹರೀಶ ಗಂಭೀರ್, ಬೆಂಗಳೂರು

## ಸೇವಾನಿಧಿ ದಾನಿಗಳು

ವೆಲ್ವೆಟ್ ಟ್ರಾವೆಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
ಶ್ರೀ ಮಧ್ವಮೂರ್ತಿ, ಉಡುಪಿ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಕು. ಸಂತೃಪ್ತಿ ಆರ್. ಫಡ್ಕೆ, ಬೆಳ್ತಂಗಡಿ
ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಕಾರ್ತಿಕ್ ಕೆ., ಧರ್ಮಸ್ಥಳ
ಶ್ರೀ ಅವಿನಾಶ್ ಶೆಟ್ಟಿ, ನೇತ್ರಾವತಿ
ಶ್ರೀ ಬಾಲಕೃಷ್ಣ ರಾವ್ ಕೆ., ಕನ್ಯಾಡಿ
ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್, ಅಲೆಕ್ಕಿ
ಶ್ರೀ ಬಿ. ಪುರಂದರ ಕಲ್ಮಂಜ
ಶ್ರೀ ರಜತ್ ಕುಮಾರ್ ಜೆ.ಡಿ, ವೇಣೂರು
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀಮತಿ ಬಬಿತ, ಕನ್ಯಾಡಿ
ಶ್ರೀಮತಿ ವಸಂತಿ ಗೌಡ, ದೊಂಡೋಲೆ
ಶ್ರೀ ಸುನಿಲ್ ಕುಮಾರ್ ಜೈನ್, ಕನ್ಯಾಡಿ
ಶ್ರೀ ಡಿ.ಎನ್. ಗಿರೀಶ್, ಧರ್ಮಸ್ಥಳ
ಶ್ರೀ ರಾಮದಾಸ್ ಭಂಡಾರ್ಕರ್, ಹಳೆಪೇಟೆ
ಶ್ರೀ ಪುರುಷೋತ್ತಮ್ ಡಿ.ಎ, ಧರ್ಮಸ್ಥಳ
ಶ್ರೀ ಶ್ರೀಧರ್ ಕೆ.ವಿ, ಉಜಿರೆ
ಶ್ರೀ ಜಯಾನಂದ. ಎಂ, ಕನ್ಯಾಡಿ
ಶ್ರೀಮತಿ ಸವಿತ ಮನೋಹರ್, ಕನ್ಯಾಡಿ
ಶ್ರೀ ಉದಯ ಶಂಕರ್, ಅರಸಿನಮಕ್ಕಿ
ಶ್ರೀಮತಿ ಶಾಂತ ಸುರೇಶ್, ಉಜಿರೆ
ಡಾ. ರಾಮಕೃಷ್ಣ ಜಿ.ಎನ್, ಕನ್ಯಾಡಿ
ಶ್ರೀ ರಾಜೇಶ್ ಫಡ್ಕೆ, ಬೆಂಗಳೂರು
ಶ್ರೀ ಕೆ. ಸೂರ್ಯನಾರಾಯಣ ರಾವ್, ದೊಂಡೋಲೆ
ಶ್ರೀ ಶಿವಕುಮಾರ್ ಆರ್ಟ್ಸ್, ಹಳೆಪೇಟೆ
ಶ್ರೀ ಮಧುಸೂದನ್ ಎಚ್.ಕೆ, ಉಜಿರೆ

## ವಸ್ತು ರೂಪದಲ್ಲಿ ದೇಣಿಗೆ ನೀಡಿದ ದಾನಿಗಳು

ಉಜಿರೆ ಹವ್ಯಕ ವಲಯ, ಉಜಿರೆ
ಅಮೃತ ಶಿಶುನಿವಾಸ, ಬೆಂಗಳೂರು
ಶ್ರೀ ಮಧ್ವಮೂರ್ತಿ. ಪಿ, ಉಡುಪಿ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ

# ಉಜಿರೆಯಲ್ಲಿ ಬೃಹತ್ ರಕ್ತದಾನ ಶಿಬಿರ–168 ಯುನಿಟ್ ರಕ್ತಸಂಗ್ರಹ






ಇತ್ತೀಚಿನ ದಿನಗಳಲ್ಲಿ ರಕ್ತದಾನದ ಮಹತ್ವದ ಬಗ್ಗೆ ಜನರಿಗೆ ಅರಿವಾಗುತ್ತಿದೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುವ ಈ ದಾನದಿಂದ ಅನೇಕರನ್ನು ಬದುಕಿಸಲು ಸಾಧ್ಯವಾಗುತ್ತಿದೆ ಎಂದು ಬೆಳ್ತಂಗಡಿ ತಾಲೂಕಿನ ರೋಟರಿ ಕ್ಲಬ್‌ನ ನಿಯೋಜಿತ ಅಧ್ಯಕ್ಷರಾದ ಪೂರನ್ ವರ್ಮ ನುಡಿದರು.

ಅವರು ದಿನಾಂಕ 26 ರಂದು ಉಜಿರೆಯ ಶ್ರೀ ಶಾರದಾಮಂಟಪದಲ್ಲಿ ಬೆಳ್ತಂಗಡಿ ರೋಟರಿ ಕ್ಲಬ್ ಆಶ್ರಯದಲ್ಲಿ ಜರುಗಿದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ರಕ್ತದಾನಿಗಳಿಗೆ ಹಾಗೂ ಸಹಭಾಗಿತ್ವ ನೀಡಿದ ಸಂಘ ಸಂಸ್ಥೆಗಳಿಗೆ ಶುಭ ಹಾರೈಸಿದರು. ಸಮಾರಂಭದ ಅಧ್ಯಕ್ಷರಾಗಿ ಭಾಗವಹಿಸಿದ ಉಜಿರೆ ಜನಾರ್ದನ ಸ್ವಾಮಿ ದೇವಾಸ್ಥಾನದ ಆಡಳಿತ ಮೊಕ್ತೇಸರರಾದ ಶರತ್‌ಕೃಷ್ಣ ಪಡ್ವೆಟ್ನಾಯರು ಮಾತನಾಡಿ ಉಜಿರೆಯಲ್ಲಿ ಅನೇಕ ವರ್ಷಗಳಿಂದ ಅನೇಕ ಸೇವಾಕಾರ್ಯಗಳು ಆಗುತ್ತಿರುತ್ತದೆ. ರಕ್ತದಾನದ ಅವಶ್ಯಕತೆ ಪ್ರಸ್ತುತ ದಿನಗಳಲ್ಲಿ ಅನಿವಾರ್ಯ. ಯುವ ಸಮೂಹ ಇದಕ್ಕೆ ಕೈಜೋಡಿಸುತ್ತಿರುವುದೂ ಕೂಡಾ ಉತ್ತಮ ಬೆಳವಣಿಗೆ ಎಂದು ರಕ್ತದಾನಿಗಳಿಗೆ ಶುಭಾಶಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಪ್ರಸ್ತಾವನೆಯನ್ನು ಸೇವಾಭಾರತಿ ಕನ್ಯಾಡಿ ವಿನಾಯಕ ರಾವ್ ಮಾಡಿದ ಕಾರ್ಯಕ್ರಮದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಸ್ವರ್ಣಗೌರಿ ಸ್ವಾಗತಿಸಿದರು. ಪ್ರಾಧ್ಯಾಪಕರಾದ ಶ್ರೀಧರ್ ಭಟ್ ನಿರೂಪಿಸಿದ ಕಾರ್ಯಕ್ರಮದಲ್ಲಿ ಔಷಧಿ ವ್ಯಾಪಾರಸ್ಥರ ಸಂಘ ಬೆಳ್ತಂಗಡಿ ಕಾರ್ಯದರ್ಶಿ ಆಗಿರುವ ಶ್ರೀ ಮಾಧವ ಗೌಡ ಧನ್ಯವಾದವಿತ್ತರು. ಒಟ್ಟು 168 ಯುನಿಟ್ ರಕ್ತವನ್ನು ಮಂಗಳೂರಿನ KMC ರಕ್ತನಿಧಿ ಕೇಂದ್ರದ ಸಹಕಾರದಲ್ಲಿ ಸಂಗ್ರಹಿಸಲಾಯಿತು. ಶಿಬಿರವನ್ನು ಕನ್ಯಾಡಿಯ ಸೇವಾಭಾರತಿ ಸಂಘಟಿಸಿದ್ದು, ಶ್ರೀ ಜನಾರ್ದನ ಸ್ವಾಮಿ ಸೇವಾಟ್ರಸ್ಟ್(ರಿ) ಉಜಿರೆ, ಬೆಳ್ತಂಗಡಿ ತಾಲೂಕು ಔಷಧ ವ್ಯಾಪಾರಸ್ಥರ ಸಂಘ, ಗೌಡರ ಯಾನೆ ಒಕ್ಕಲಿಗರ ಸೇವಾ ಸಮಿತಿ (ರಿ) ಉಜಿರೆ, ಬಂಟರ ಸಂಘ ಉಜಿರೆ, ಬೆನಕ ಹೆಲ್ತ್ ಸೆಂಟರ್ ಉಜಿರೆ, ಹವ್ಯಕವಲಯ ಉಜಿರೆ, ಶ್ರೀ ಶಾರದಾ ಸೇವಾ ಟ್ರಸ್ಟ್ ಉಜಿರೆ, ಪ್ರಗತಿ ಮಹಿಳಾ ಮಂಡಲ ಉಜಿರೆ, ಸಿಂಧೂ ಇಲೆಕ್ಟ್ರಿಕಲ್ಸ್ ಉಜಿರೆ, ಚಿರಂಜೀವಿ ಯುವಕ ಮಂಡಲ ಕಾನರ್ಪ, ಸಿ.ಎ. ಬ್ಯಾಂಕ್ ಬೆಳ್ತಂಗಡಿ ಹಾಗೂ ಉಜಿರೆಯ SDM ಕಾಲೇಜಿನ NSS ಘಟಕಗಳ ಸಹಭಾಗಿತ್ವದಿಂದ ಶಿಬಿರ ಯಶಗೊಂಡಿತು.



# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...



ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ ಅಲೆಕ್ಕಿ



ಶ್ರೀ ಕಾರ್ತಿಕ್. ಕೆ ಧರ್ಮಸ್ಥಳ



ಶ್ರೀ ಸತೀಶ್ ಸೇವಾಭಾರತಿ



ಶ್ರೀಮತಿ ರಾಜೀವಿ ಸೇವಾಭಾರತಿ



ಶ್ರೀ ಅಭಿನಂದನ್. ಎನ್ ಮತ್ತು ಶ್ರೀಮತಿ ವಿದ್ಯಾ



ಶ್ರೀ ಅಭಿಲಾಶ್ ಮತ್ತು ಶ್ರೀಮತಿ ಅಕ್ಷಿತಾ



ಡಾ। ಎ. ಜಯಕುಮಾರ ಶೆಟ್ಟಿ



ರೋ। ಶ್ರೀಧರ್ ಕೆ.ವಿ




ಮಾಸ್ಟರ್। ಅದ್ವೈತ್ ಪೈ



ಶ್ರೀ ಶೌರ್ಯ ವಿ. ರಾವ್



ಡಾ. ಸುರಕ್ಷಾ



ಶ್ರೀ ವಿಕ್ರಾಂತ್ ಮತ್ತು ಶ್ರೀಮತಿ ಅನುಷಾ



ಶ್ರೀ ಹರೀಶ್ ಗಂಭೀರ್ ಮತ್ತು ಶ್ರೀಮತಿ ಸಂಗೀತಾ ಹರೀಶ್



ಶ್ರೀಮತಿ ಪವಿತ್ರ ಜಿ.ಕೆ.



ಶ್ರೀಮತಿ ಮಮತಾ ವಿಶ್ವನಾಥ್

*Life would be tragic if it weren't funny*

## ಮೇ ತಿಂಗಳಲ್ಲಿ ಗಾಲಿಕುರ್ಚಿ ವಿತರಣೆ



ಶ್ರೀ ರವಿ. ಬಿ,
ಆಲ್ದೂರು

## ಮೇ ತಿಂಗಳಲ್ಲಿ ವಾಕರ್ ವಿತರಣೆ



ಶ್ರೀ ವಿಶ್ವನಾಥ್,
ಉತ್ತಮೇಶ್ವರ್

## ಮೇ ತಿಂಗಳಲ್ಲಿ ಗಾಳಿ ಹಾಸಿಗೆ ವಿತರಣೆ



ಶ್ರೀ ಪೂರ್ಣೇಶ್,
ಶೃಂಗೇರಿ



ಶ್ರೀ ಅಶೋಕ್,
ತೀರ್ಥಹಳ್ಳಿ


## ಮೇ ತಿಂಗಳ ಸೇವಾ ಕಾರ್ಯಗಳು

1. ಗಾಲಿಕುರ್ಚಿ ವಿತರಣೆ – 1
2. ವಾಕರ್ ವಿತರಣೆ – 1
3. ಸೋಲಾರ್ ಲೈಟ್ – 4
4. ಸೆಲ್ಫ್‌ಕೇರ್ ಮತ್ತು ಮೆಡಿಕಲ್ ಕಿಟ್ – 45
5. ಗಾಳಿಯ ಹಾಸಿಗೆ ಮತ್ತು ನೀರಿನ ಹಾಸಿಗೆ – 7
6. ಸಮುದಾಯ ಮತ್ತು ಕೇಂದ್ರ ಆಧಾರಿತ ಪುನಶ್ಚೇತನ ಸೇವೆಗಳು – 772

## ಸೇವಾ ಸಂಗಮ

## ಆನ್‌ಲೈನ್ ಕಾರ್ಯಾಗಾರ




ಮೇ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ। ಆದರ್ಶ್ ಜೆ. ಫಿಸಿಯೋಥೆರಪಿಸ್ಟ್, ಅಸೋಸಿಯೇಷನ್ ಪೀಪಲ್ ವಿತ್ ಡಿಸೆಬಿಲಿಟಿ, ಬೆಂಗಳೂರು ಇವರು ಬೆನ್ನುಹುರಿ ಅಪಘಾತದ ನಂತರ ಹೃದಯ ರಕ್ತನಾಳದ ವ್ಯವಸ್ಥೆಯ ಮೇಲೆ ಪರಿಣಾಮದ ಬಗ್ಗೆ ಮಾಹಿತಿ ಇತ್ತರು. ಕಾರ್ಯಗಾರದಲ್ಲಿ ಒಟ್ಟು 50 ಮಂದಿ ಭಾಗವಹಿಸಿದ್ದರು.

*Once you choose hope, anything's possible*

# ಗಾಯದ ಬದುಕಿಗೆ ಸಂಜೀವಿನಿಯಾದ ಸೆಲ್ಕೋ

ಬದುಕು ಎಲ್ಲರಿಗೂ ಇದೆ ಬದುಕಿ ಬಾಳಬೇಕಾದವರು ನಾವು. ಆದರೆ ಎಲ್ಲೋ ಒಮ್ಮೆ ಜೀವನದ ರಥ ಕೈಕೊಟ್ಟಲ್ಲಿ ಬಾಳೆಲ್ಲ ಬರೀಗೋಳು. ನಾವು ಬಯಸುವುದೊಂದು ವಿಧಿಯಲೀಲೆ ಇನ್ನೊಂದು. ಬೆನ್ನುಹುರಿ ಅಪಘಾತ ಗೊಂಡವರ ಬದುಕು ಇದೇ ರೀತಿ ಒಮ್ಮೆ ಅಪಘಾತಗೊಂಡಲ್ಲಿ ಮತ್ತೆಂದೂ ಬದುಕು ಮರಳಿ ವೈಭವದ ಕಡೆಗೆ ಹೋಗಲಾರದು. ಸರಕಾರದ ನೀತಿ ನಿಯಮಗಳು ಗೊಂದಲ ಗೋಜಲುಗಳು, ಸರಿಯಾದ ಅನುಪಾನ, ಆರೈಕೆಯ ಕೊರತೆಯೊಂದಿಗೆ ಒಂದಾದ ಮೇಲೊಂದರಂತೆ ದೇಹಕ್ಕೆ ದಾಳಿಮಾಡುವ **ದ್ವಿತೀಯಂತರ ಸಮಸ್ಯೆಗಳು ಒಂದಲ್ಲ ಎರಡಲ್ಲ ಹಲವಾರು. ಬಿಪಿ, ಸಕ್ಕರೆಕಾಯಿಲೆ, ಸೆಟೆತನ, ಬಿಗಿತನ, ಒತ್ತಡಗಾಯಗಳು, ಮಾನಸಿಕ ಕುಗ್ಗುವಿಕೆ, ಪೈಲ್ಸ್, ಪಿಸ್ತೂಲ್, ಫಿಶರ್, ಸೆಲ್ಯುಲೈಟಿಸ್, ಮಲಮೂತ್ರಗಳ ನಿರ್ವಹಣೆಯಲ್ಲಿ ಅಸಮತೋಲನ, ರಕ್ತಗೆಡ್ಡೆಗಳು** ಇವುಗಳೆಲ್ಲ ತಾಮುಂದೆ ಎಂದು ಹೊಂಚು ಹಾಕುತ್ತಿರುವುದು ಹಗಲಿನಷ್ಟು ಸತ್ಯ.

ಇವೆಲ್ಲದರೆಡೆ ಒತ್ತಡಗಾಯಗಳು ಆದಲ್ಲಿ ಅದರ ನಿರ್ವಹಣೆಯೇ ಅತಿಕಷ್ಟ ಮತ್ತು ಗುಣಮುಖವಾಗುವುದು ತಡವಾದರೂ ಮರೀಚಿಕೆಯೇ ಕುಳಿತುಕೊಳ್ಳಲು ಆಗದೆ ಬದಿಗೆ ಮಲಗಲು ಆಗದೆ ಜೀವನ ಕಷ್ಟಕರವಾಗಿರುತ್ತದೆ. ನಿರಂತರ ಜೀರೋ ಸಿಟ್ಟಿಂಗ್ (ಕುಳಿತುಕೊಳ್ಳದೆ ಇರುವುದು) ನಲ್ಲಿ ಬೋರಲಾಗಿ ಮಲಗಿರುವುದು, ಗಾಳಿ, ಬೆಳಕು, ಔಷದೋಪಚಾರ, ಗಾಳಿಹಾಸಿಗೆಗಳಲ್ಲದೆ ನಿರಂತರವಾಗಿ ಔಷಧಿಯ ಅನುಪಾನ, ಗಾಯಗಳ ಸ್ವಚ್ಛತೆ ಮಾಡಬೇಕಿದೆ. ಆದರೆ ಗಾಳಿಹಾಸಿಗೆಯಲ್ಲಿ ಮಲಗಬೇಕಾದರೂ ಅದಕ್ಕೆ ನಿರಂತರ ವಿದ್ಯುತ್ ಸೌಲಭ್ಯವೇ ಸಿಗದಿರುವುದು ಗಾಯವನ್ನು ಇನ್ನಷ್ಟು ತೀವ್ರತೆಗೆ ಕೊಂಡೊಯ್ಯಲು ಕಾರಣವಾಗುತ್ತದೆ. ಒಂದುವೇಳೆ ಗಾಳಿಹಾಸಿಗೆಗೆ ನಿರಂತರ ವಿದ್ಯುತ್ ಸಿಗಬೇಕಾದರೆ ಮತ್ತಷ್ಟು ಖರ್ಚಿನ ದಾರಿ. ಮತ್ತೆಮತ್ತೆ ಖರ್ಚಿನ ದಾರಿಗಳಿಗೆ ಆದಾಯ ಸಾಲದಾಗಿದೆ. ಈ ನಿಟ್ಟಿನಲ್ಲಿ ಇಂತಹವರ ಬಾಳನ್ನು ಹತ್ತಿರದಿಂದ ನೋಡಿದ ಮತ್ತು ಕನ್ಯಾಡಿಯ ಸೇವಾಭಾರತಿಯ 2018 ರಲ್ಲಿ ಸೌತಡ್ಕದಲ್ಲಿ ಬೆನ್ನುಹುರಿ ಅಪಘಾತಕೊಳಗಾದ ದಿವ್ಯಾಂಗರಿಗೆ ಸೇವಾಧಾಮ ಹೆಸರಿನಲ್ಲಿ ಸ್ಥಾಪಿಸಿದ ಪುನಶ್ಚೇತನ ಕೇಂದ್ರಕ್ಕೆ ಸದಾ ಒಂದಿಲ್ಲೊಂದು ರೀತಿಯಲ್ಲಿ ಸಂಸ್ಥೆಯ ಫಲಾನುಭವಿಗಳಿಗೆ ಬೆನ್ನೆಲುಬಾಗಿ ಸ್ಪಂದಿಸಿದ್ದು ಸೆಲ್ಕೋ ಕಂಪನಿ.

**ಒತ್ತಡಗಾಯದವರಿಗಾಗಿ ವಿಶೇಷವಾಗಿ ರೂಪಿಸಿದ ಯೋಜನೆಯಡಿ ಯಲ್ಲಿ 1 ಬಲ್ಬ್, 1 ಪ್ಲಗ್, 1 ಫ್ಯಾನ್, ಹಾಗೂ ಮಲಗುವ ಹಾಸಿಗೆಗೆ 24 ಗಂಟೆ ನಿರಂತರ ವಿದ್ಯುತ್ ನೀಡುವ ಯೂನಿಟ್‌ಗಳನ್ನು ಸೆಲ್ಕೋ ಪೌಂಡೇಶನ್. 25 ಮಂದಿ ಬೆನ್ನುಹುರಿ ಅಪಘಾತಗೊಂಡು ತೀವ್ರತರಹದ ಒತ್ತಡಗಾಯದಲ್ಲಿ ನರಳುತ್ತಿರುವ ದಿವ್ಯಾಂಗರಿಗೆ ರೂ. 65,000 ಮೊತ್ತದ ಸೋಲಾರ್ ಕಿಟ್‌ನ್ನು ಪ್ರತಿ ಮನೆಗೆ ಉಚಿತವಾಗಿ ಕೊಡುಗೆ ನೀಡಿದ್ದು, ಇದರ ಕಾರ್ಯಾನುಷ್ಠಾನವನ್ನು ಸೆಲ್ಕೋ ಲೈಟ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರು ಮಾಡಿರುತ್ತಾರೆ. ಅಕ್ಷರಶಃ ಇದೊಂದು ಮಾನವೀಯ ಕಾರ್ಯ.** ಆ ಕಾರಣದಿಂದ ನಾವೆಲ್ಲರೂ ಪೌಂಡೇಶನ್ ಮತ್ತು ಕಂಪನಿಗೆ ಚಿರಋಣಿಗಳು. ಮನೆಯಲ್ಲಿ ಅನಿಯಮಿತ ವಿದ್ಯುತ್ ಸಮಸ್ಯೆ ಇರುವಂತಹ ದಿವ್ಯಾಂಗರ ಬದುಕಿಗೆ ಆಸರೆಯಾದ ತನ್ನ ವಿಶೇಷ ಶೈಲಿಯಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ಸೆಲ್ಕೋ ಕಂಪನಿಯು ಸದ್ದುಗದ್ದಲವಿಲ್ಲದೆ ಮಾಡಿಮುಗಿಸಿದೆ. ಈ ಮೂಲಕ ಒತ್ತಡಗಾಯದವರಿಗೆ ಸಂಜೀವಿನಿಯಾದ ಸೆಲ್ಕೋಗೆ ಸೇವಾಭಾರತಿ–ಸೇವಾಧಾಮ ಮತ್ತು ಎಲ್ಲಾ ಫಲಾನುಭವಿಗಳ ಪರವಾಗಿ ತುಂಬುಹೃದಯದ ಅಭಿವಂದನೆಗಳು ಮತ್ತು ಧನ್ಯವಾದಗಳು.

ಸೆಲ್ಕೋದ ಟೆಕ್ನಿಷಿಯನ್‌ನಿಂದ ಮ್ಯಾನೇಜರ್‌ತನಕ, ಮ್ಯಾನೇಜರ್‌ನಿಂದ DGM ತನಕ, DGM ನಿಂದ CEO ತನಕ, CEO ಇಂದ ಫೌಂಡರ್ ತನಕ ಎಲ್ಲರ ನಗುಮುಖದ ಸೇವೆಯೇ ದಿವ್ಯಾಂಗರಿಗೆ ಶಕ್ತಿ ತುಂಬಿಕೊಟ್ಟಿದೆ. ಆ ಎಲ್ಲಾ ಸಿಬ್ಬಂದಿಗಳಿಗೂ, ಅಧಿಕಾರಿಗಳಿಗೂ, ಸಂಸ್ಥಾಪಕರಿಗೂ ಮತ್ತು ಅವರೆಲ್ಲರ ಕುಟುಂಬವರ್ಗಕ್ಕೆ ಭಗವಂತ ಆಯಸ್ಸು ಆರೋಗ್ಯ ಸಹಿತ ಸಕಲೈಶ್ವರ್ಯಗಳನ್ನು ಕರುಣಿಸಲಿ ಎಂಬುದು ನಮ್ಮ ಆಶಯ.

## ಸೋಲಾರ್ ಕಿಟ್ ವಿತರಣೆ


ಶ್ರೀ ಭಾಸ್ಕರ್, ಮರ್ಕಂಜ


ಶ್ರೀ ಚಂದ್ರಶೇಖರ್ ಭಟ್, ನಿಡ್ಲೆ


ಶ್ರೀ ಮಧುಕೇಶ್ವರ, ಸಿದ್ದಾಪುರ


ಶ್ರೀ ಮಹೇಶ್ ಎಚ್.ಕೆ. ಹಲಸೂರು


ಶ್ರೀ ದಿನೇಶ್ ಹೆಗ್ಡೆ, ಶಿರಸಿ


ಶ್ರೀ ದಯಾನಂದ ಕೊಡ್ಲಿಪೇಟೆ



ಶ್ರೀಮತಿ ದೀಪಾಗೌಡ


ಶ್ರೀ ಮಂಜುನಾಥ ತುಳಸಿ ಗೌಡ


ಶ್ರೀ ಮನೋಜ್, ಬಾಸಪುರ


ಶ್ರೀ ಗಣೇಶ್, ಬಾಳೆಹಿತ್ಲು


ಶ್ರೀ ಹರೀಶ್ ಬಿ.ಎಂ, ಚೆಂಬು


ಶ್ರೀ ಇಬ್ರಾಹಿಂ, ತಣ್ಣೀರುಪಂತ


ಶ್ರೀ ಜಾನು. ವಿ, ತಾಂಡ್ಯ


ಶ್ರೀ ಕರುಣಾಕರ ಪೂಜಾರಿ, ಕಂಬಳಬೆಟ್ಟು


ಶ್ರೀ ವಿಷ್ಣು ಕೆ.ಪಿ, ಕಡಂಗ

## ಸೋಲಾರ್ ಕಿಟ್ ವಿತರಣೆ


ಶ್ರೀ ರಾಮಚಂದ್ರ ಗೌಡ, ತಿಮರಡ್ಡ


ಶ್ರೀ ರಂಜಿತ್, ಚಂದುಗೋಡು


ಶ್ರೀ ರವೀಂದ್ರ, ವಿಟ್ಲ


ಶ್ರೀ ಸೀನಪ್ಪ, ಬಜತ್ತೂರು


ಶ್ರೀ ಶರತ್ ಪೂಜಾರಿ, ಕಡಬ


ಶ್ರೀ ಸೋಮುಯಾದು ಗೌಡ, ಉತ್ತರಕನ್ನಡ


ಶ್ರೀ ತಿಮ್ಮುವೆಂಕು ಗೌಡ, ಉತ್ತರಕನ್ನಡ


ಶ್ರೀ ಉದಯ ಎಂ.ಬಿ, ಚಿಟ್ಟಿಮಣೆ


ಶ್ರೀ ಉದಯ ಮಹದೇವ್ ನಾಯಕ್
ಉತ್ತರಕನ್ನಡ


ಶ್ರೀ ಉಮೇಶ್ ಬಂಡಿ
ಉತ್ತರಕನ್ನಡ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನಾನು ಸದಾಶಿವ ಕೆ. ಊರು ಹಾಸನ ಜಿಲ್ಲೆ, ಅರಸೀಕೆರೆಯವನಾದ (ಮೂಲ ಸ್ಥಾನ – ಕಲ್ಯಾಡಿ).ನಾನು ದಿನಾಂಕ 28–12–2022 ರಂದು ಬುಧವಾರ ಸಂಜೆ 7:15 ಸುಮಾರಿಗೆ ರಸ್ತೆ ಅಪಘಾತದಲ್ಲಿ ಬೆನ್ನುಹುರಿ ಸಮಸ್ಯೆಗೆ ಒಳಗಾದೆ ನಂತರ ಅರಸೀಕೆರೆ ಜೆ.ಸಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹಾಸನ ಎಸ್.ಎಸ್.ಎಮ್ (SSM) ನಲ್ಲಿ ಟ್ರೀಟ್ಮೆಂಟ್ ಪಡೆದು ಬೆಂಗಳೂರು ಪ್ರೀಮಿಯರ್ ನ್ಯೂರೋ ಕೇರ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಮಾಡಲಾಯಿತು. ನಂತರ ಪ್ರೆಶರ್ ಸೋರ್ (ಒತ್ತಡದ ನೋವು) ನಿಂದ ಬಹಳ ತಿಂಗಳುಗಳ ಕಾಲ ಬಳಲಿ ನಂತರ ಮ್ಯಾಕ್ಸ್ (MAX) ಆಸ್ಪತ್ರೆ ಶಿವಮೊಗ್ಗದಲ್ಲಿ ಚಿಕಿತ್ಸೆ ಪಡೆದು ಪುನಃ ಶಸ್ತ್ರಚಿಕಿತ್ಸೆ (ಬೆನ್ನುಹುರಿಗೆ) ಅಗತ್ಯವೆಂದು ವೈದ್ಯರು ತಿಳಿಸಿದರು. ಸುಬ್ಬಯ್ಯ ಆಸ್ಪತ್ರೆ ಶಿವಮೊಗ್ಗದಲ್ಲಿ G-G ಭಾಗಕ್ಕೆ ಕ್ಲಾಂಪ್ (clamp) ಅಳವಡಿಸಲಾಯಿತು. ಮುಂದುವರೆದು ನಮ್ಮ ಮನೆಯಲ್ಲಿ ಫಿಸಿಯೋಥೆರಪಿಸ್ಟ್ ಮಧು ಅವರಿಂದ ಥೆರಪಿ ಮಾಡಿಸಲಾಯಿತು. ಅವರ ಸಲಹೆ ಮೇರೆಗೆ ನಾವು ಶ್ರೀ ವಿನಾಯಕ ಸರ್ ರವರೊಂದಿಗೆ ಫೋನ್ ಕರೆ ಮೂಲಕ ಮಾತನಾಡಿ ದಿನಾಂಕ 10–4–2024 ರಂದು ಇಲ್ಲಿ ದಾಖಲಾದೆನು.

ಇಲ್ಲಿಗೆ ಬಂದ ಸಂದರ್ಭದಲ್ಲಿ ನನಗೆ ಕೂರಲು ಸಾಧ್ಯವಾಗುತ್ತಿರಲಿಲ್ಲ. ನಾನಿಲ್ಲಿದ್ದದು 45 ದಿನಗಳು ಮಾತ್ರವಾದರೂ ಸಾಕಷ್ಟು ಬದಲಾವಣೆಗಳು (improvement) ನನ್ನ ದೈಹಿಕ ಬಲದಲ್ಲಿ ಹಾಗೂ ಮಾನಸಿಕ ಸ್ಥೈರ್ಯ ಹೆಚ್ಚಾಗಿದೆ. ನನ್ನ ತೋಳುಗಳಿಗೆ, ಸೊಂಟಕ್ಕೆ, ಕಾಲುಗಳ ಮಾಂಸ ಖಂಡಗಳು ಸಾಕಷ್ಟು ಬದಲಾವಣೆ (improve). ಆಗಿದ್ದು ಈಗ ನಾನು ಸುಮಾರು 30 ರಿಂದ 45 ನಿಮಿಷಗಳು ಏನನ್ನು ಒರಗದೆ ಕೂರಬಲ್ಲೆ. ಅಲ್ಲದೆ ಸಹಿ ಮಾಡಲು ಸಾಧ್ಯವಾಗುತ್ತಿದೆ. ಇದೆಲ್ಲದಕ್ಕೂ ಕಾರಣ ಇಲ್ಲಿ ನೀಡುತ್ತಿರುವ ಫಿಜಿಯೋಥೆರಪಿ ಗಣೇಶ್ ಕಾರ್ತಿಕ್ ಸರ್ ಹಾಗೂ ಸುರಕ್ಷಾ ಮೇಡಂ, ಇವರ ಡೆಡಿಕೇಶನ್ ಸಾಕಷ್ಟು ತೃಪ್ತಿ ತಂದಿದೆ. ಪ್ರತಿಯೊಂದು ವ್ಯಾಯಾಮವನ್ನು ವಿವರಣೆಯೊಂದಿಗೆ (with explanation) ತಿಳಿಸಿಕೊಟ್ಟಿದ್ದಾರೆ. ನನ್ನನ್ನು ಸಾಕಷ್ಟು ಶಿಕ್ಷಣ(educate) ಮಾಡಿದ್ದಾರೆ. ಇಬ್ಬರಿಗೂ ನಾನು ಧನ್ಯವಾದಗಳು ತಿಳಿಯಬಯಸುತ್ತೇನೆ. ಮುಂದೆಯೂ ಇವರ ಸಲಹೆಯಂತೆ ವ್ಯಾಯಾಮಗಳನ್ನು ಮುಂದುವರೆಸುತ್ತಾ ನಡೆಯಲು ಇನ್ನು ಹೆಚ್ಚಿನ ಸುಧಾರಣೆಯಾಗಲು ಶ್ರಮಿಸುತ್ತೇನೆ. ಹಾಗೆಯೇ ಇಲ್ಲಿಯ ಸಹರೋಗಿಗಳು(co- patients) ಮತ್ತು ಕೇರ್ ಟೇಕರ್ ನಮಗೆ ಸಹಕಾರ ನೀಡಿರುತ್ತಾರೆ ಅವರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ.

ಕಡೆಯದಾಗಿ ನನ್ನದೊಂದು ಸಲಹೆ ಇದೆ, ಏನೆಂದರೆ ಇಲ್ಲಿಯ ಆಹಾರ ಕ್ರಮವು ಉತ್ತಮವಿದ್ದು ಆದರೆ ಇನ್ನೂ ಸ್ವಲ್ಪ ಉತ್ತಮವಾದ ಆಹಾರ ಪದಾರ್ಥವನ್ನು ನೀಡುವುದು ಎಲ್ಲರಿಗೂ ಅನುಕೂಲವೆಂದು ನನ್ನ ಅಭಿಪ್ರಾಯ. ನನ್ನ ಸಲಹೆಯನ್ನು ಸ್ವೀಕರಿಸುವಿರೆಂದು ಭಾವಿಸಿ ನನಗೆ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದಕ್ಕಾಗಿ ಶ್ರೀ ಕೆ. ವಿನಾಯಕ ಸರ್ ಅವರಿಗೆ ಹಾಗೂ ಫಿಜಿಯೋಥೆರಪಿಸ್ಟ್ ಡಾ. ಗಣೇಶ ಹಾಗೂ ಡಾ. ಸುರಕ್ಷಾ ಗೂ ಧನ್ಯವಾದಗಳನ್ನು ತಿಳಿಸುತ್ತೇನೆ.

ಧನ್ಯವಾದಗಳೊಂದಿಗೆ

ನಿಮ್ಮ ವಿಶ್ವಾಸಿ
**ಸದಾಶಿವ. ಕೆ**

*I dont need easy, I just need possible*

## ನಿಮಗಿದು ತಿಳಿದಿರಲಿ

**ಬೆನ್ನುಹುರಿ ಅಪಘಾತಕ್ಕೊಳಗಾದ ನಂತರ ಮಾನವ ದೇಹವು ಹೊಂದಿಕೊಳ್ಳುವ ಮತ್ತು ಸರಿದೂಗಿಸುವ ಅದ್ಭುತ ಸಾಮರ್ಥ್ಯವನ್ನು ಹೊಂದಿದೆ ಎಂದು ನಿಮಗೆ ತಿಳಿದಿದೆಯೇ?**

ಸ್ನಾಯುಗಳು ಮತ್ತು ಕಾರ್ಯಗಳನ್ನು ನಿಯಂತ್ರಿಸಲು ಹೊಸ ಮಾರ್ಗಗಳನ್ನು ಕಂಡುಕೊಳ್ಳಲು ಮೆದುಳು ತನ್ನನ್ನು ತಾನೇ ಮರು ಸಂಘಟಿಸಬಹುದು, ಈ ಪ್ರಕ್ರಿಯೆಯನ್ನು ನ್ಯೂರೋಪ್ಲಾಸ್ಟಿಸಿಟಿ ಎಂದು ಕರೆಯಲಾಗುತ್ತದೆ! ಪುನಶ್ಚೇತನ ಚಿಕಿತ್ಸೆ ಮತ್ತು ಬೆಂಬಲದೊಂದಿಗೆ, ಬೆನ್ನುಹುರಿ ಅಪಘಾತ ಹೊಂದಿರುವ ಅನೇಕ ವ್ಯಕ್ತಿಗಳು ಗಮನಾರ್ಹವಾದ ಚೇತರಿಕೆಗಳನ್ನು ಸಾಧಿಸಬಹುದು ಮತ್ತು ಉತ್ತಮ ಜೀವನವನ್ನು ನಡೆಸಬಹುದು.

## ನಮ್ಮ ಯೋಜನೆಗಳು

**ಆರೋಗ್ಯಮ್** : ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ** : ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ** : ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ** : ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### Account Details

| | |
|---|---|
| A/c Holder | - M/s. Sevabharathi(R) |
| A/c No | - 120000400920 |
| IFS Code | - CNRB0010246 |
| Bank | - Canara Bank, Dharmasthala Branch |
| A/c Type | - Current Account |

| | |
|---|---|
| A/c Holder | - M/s. Sevabharathi(R) |
| A/c No | - 01682200072637 |
| IFS Code | - CNRB0010168 |
| Bank | - Canara Bank, Kokkada Branch |

**DONATE & JOIN US IN OUR MISSION**

*We are put in situations to build our character... not destroy us*